ಓ.ಎಸ್.ನಂ. *360/2020*

**ಪಿ ಡಬ್ಲ್ಯೂ-*1***

***ದಿಃ 08-10-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಮುಖ್ಯ ವಿಚಾರಣೆಃ ವಾದಿ ಪರ ಶ್ರೀಮತಿ ಹೆಚ್ ಬಿ    ವಕೀಲರಿಂದ.***

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ನ್ಯಾಯಾಲಯಕ್ಕೆ ವಂಶವೃಕ್ಷದ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*1* ಎಂದು ಗುರುತಿಸಲಾಯಿತು. ಆರು ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-*2* ರಿಂದ ನಿಪಿ-*7* ಎಂದು ಗುರುತಿಸಲಾಯಿತು. ಎರಡು ಇ ಸ್ವತ್ತಿನ ಗಣಕೀಕೃತ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-*8* ಮತ್ತು ನಿಪಿ-*9* ಎಂದು ಗುರುತಿಸಲಾಯಿತು. ದಿನಾಂಕಃ *23-06-2014* ರ ದಾನ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*10* ಎಂದು ಗುರುತಿಸಲಾಯಿತು. ಎಂ ಆರ್ ನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*11* ಎಂದು ಗುರುತಿಸಲಾಯಿತು. ಅಸಸ್ ಮೆಂಟ್ ಎಕ್ಸಟ್ರಾಕ್ಟನ ಎರಡು ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-*12* ಮತ್ತು ನಿಪಿ-*13* ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರಿದ ಮುಖ್ಯವಿಚಾರಣೆಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯ್ತು**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**